**ದಿನಾಂಕ:19-11-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 24 ಮತ್ತು 25 ನೇ ಪ್ರತಿವಾದಿ ಪರ ಶ್ರೀ.ಸಿ.ಹೆಚ್.ಜಿ ವಕೀಲರಿಂದ:**

ಸದರಿ ದಾವೆಯನ್ನು ಜ್ಯೋತಿ ಎಂಬುವವರು ಚನ್ನಬಸನಗೌಡರವರ ಮಕ್ಕಳ ವಿರುದ್ಧ ಸಲ್ಲಿಸಿರುತ್ತಾರೆ. ಅವರುಗಳು ಯಾರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ಭತ್ತದ ವ್ಯಾಪಾರ

ಮಾಡುತ್ತಿದ್ದ ಬಗ್ಗೆ ಪರವಾನಿಗೆ ಪಡೆದಿರಲಿಲ್ಲ. ರುದ್ರಪ್ಪಗೌಡರ ಮಕ್ಕಳ ಜೀವಿತ ಅವಧಿಯಲ್ಲಿ ಕೂಡಿಯೇ ವ್ಯವಸಾಯ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನಬಸನಗೌಡರವರು ಎಂದೂ ಸಹ ಮನೆತನದ ಮೇಲುಸ್ತುವಾರಿ ಮಾಡುತ್ತಿರಲಿಲ್ಲ ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅವರು ತಮ್ಮ ಜಮೀನಿನಲ್ಲಿ ಬೆಳೆದ ಕಾಳು ಕಡ್ಡಿಗಳನ್ನು ನಮಗೆ ಮಾರಾಟ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು 3 ನೇ ವಾದಿಗೆ ನನಗೆ ತಿಳಿಸಿದರು. 3 ನೇ ವಾದಿ ಹೇಳಿದಂತೆ ನಾನು ಸಾಕ್ಯೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ರುದ್ರಗೌಡರವರು ನಮ್ಮ ತಂದೆಯ ಜೊತೆ ವ್ಯವಹಾರ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರಗೌಡರವರ ಕುಟುಂಬಕ್ಕೆ ಆಸ್ತಿಗಳು ಯಾವ ರೀತಿ ಬಂದವು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ 330 ರ ಆಸ್ತಿಯನ್ನು ರುದ್ರಗೌಡರ ಮಗ ಚನ್ನಬಸನಗೌಡರು ಖರೀದಿಸಿರುವ ವಿಚಾರ ನನಗೆ ಗೊತ್ತು. ಈ ವಿಚಾರವನ್ನು ಅವರೆ ನನಗೆ ಹೇಳಿದರು. ಈ ಬಗ್ಗೆ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ಆ ಜಮೀನು ಯಾವ ವರ್ಷ ಖರೀದಿಯಾಯಿತು ಎಂಬುದು ನನಗೆ ಗೊತ್ತಿಲ್ಲ. ಸರ್ವೇ ನಂಬರ 330 ರ ಆಸ್ತಿಯನ್ನು ಚನ್ನಬಸನಗೌಡರು ಖರೀದಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 3 ನೇ ವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು** )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ